ಮಗಳು ಹೋದ ಕೊರಗು ಹಚ್ಕೊಂಡು ನಡೀತೀದಾರೆ.'

'...'

'ಮತ್ತೇನಿಲ್ಲ, ಅವರಿಗೆ ಮೊಮ್ಮಕ್ಕಳ ಚಿಂತೆ. ಹೊತ್ತಿಗೆ ಸರಿಯಾಗಿ ಮಾಡಿ ಹಾಕೋರಿಲ್ಲ. ನೆತ್ತಿಗೆ ಎಣ್ಣೆ ಹಚ್ಚೋರಿಲ್ಲ. ಸ್ಕೂಲಿಗೆ ಕಳಿಸೋರಿಲ್ಲ'. ಪಟ್ಟಿ ಮತ್ತಷ್ಟು ಉದ್ದವಾಗುವುದರೊಳಗೆ ಚಿದಾನಂದ ನಡುವೆ ಬಾಯಿ ಹಾಕಿದ್ದ.

'ಹೇಗೋ ನಡೀತಿದೆ ಮಾರಾಯಾ. ಇಬ್ರೂ ಪರಿಸ್ಥಿತಿಗೆ ಹೊಂದ್ಕೊತಿದಾರೆ. ನನ್ನ ಮಗಳು ಅಂತ ಹೇಳ್ತಿಲ್ಲ, ಭಾಮ ಜವಾಬ್ದಾರಿಯ ಹುಡುಗಿ. ತನಗೆ ಸಾಧ್ಯವಾದಷ್ಟು ಎಲ್ಲಾ ನೋಡ್ಕೊತಿದಾಳೆ'

'ಅಡುಗೆಗೆ ಜನ ಇಟ್ಕೊಂಡಿದೀರಾ?'

'ಇಲ್ಲಪ್ಪಾ. ನಮ್ಮ ಹೊತ್ತಿಗೆ ಮಾಡಿ ಹಾಕೋರು ಸಿಗ್ಬೇಕಲ್ಲ? ಬೇಜಾರಾದ್ರೆ ಇದ್ದೇ ಇದೆ ಹೋಟೆಲು...'

'ಹೋಟೆಲು ಊಟ ಮಾಡ್ಕೊಂಡು ಇರೋಕಾಗುತ್ತಾ? ಆರೋಗ್ಯಾನೂ ನೋಡ್ಕೋಬೇಕಲ್ಲ?'

'ದಿನಾ ಹೋಗಲ್ವಲ್ಲ? ನಾನು, ಭಾಮ ಸೇರ್ಕೊಂಡು ಬೆಳಿಗ್ಗೆ ಒಂದು ತಿಂಡಿ ಮಾಡ್ತೀವಿ. ಹೆಚ್ಚು ಪಕ್ಷ ಉಪ್ಪಿಟ್ಟು'

'......'

'ಅಡುಗೆ ಮಾಡೋದು ರಾತ್ರಿ. ಫ್ರಿಜ್ಜಲ್ಲಿ ಇಟ್ಕೊಂಡ್ರೆ ಎರಡು ದಿನ, ಮೂರು ದಿನ ಅಡ್ಡಿಲ್ಲ...'

'ಏನೇ ಆದರೂ ಕಷ್ಟ ಬಾವ'

'ಕಷ್ಟ ಅಂದ್ಕೊಂಡ್ರೆ ಕಷ್ಟ. ಎಂಥಾ ಕಷ್ಟ ಕೂಡ ಕಾಲ ಕಳೆದ ಹಾಗೆ ಅಭ್ಯಾಸ ಆಗ್ಬಿಡುತ್ತೆ. ದಪ್ಪ ಚರ್ಮ ಅಂದ್ರೆ ಏನಂದ್ಕಂಡಿದ್ದಿ? ಎಲ್ಲಾನೂ ಸಹಿಸ್ಕೊಳ್ಳೋ ತಾಕತ್ತು ಅಂತ...'

ಬಾಮ ಡೈನಿಂಗ್ ಟೇಬಲ್ಲಿನ ಮೇಲೆ ತಟ್ಟೆ ಇಟ್ಟು ಊಟಕ್ಕೆ ಕರೆದಳು. ಬಾವ ಹೇಳಿದ್ದು ನಿಜ ಎಂದು ಬಾವನೆಂಟನಿಗೆ ಮನವರಿಕೆ ಮಾಡಿಕೊಡುವಂತೆ ಅನ್ನ ಹೊಗೆ ಹಾಯುತ್ತಿತ್ತು. ಹುರುಳಿಕಾಯಿ ಸಾಂಬಾರು ಕೈ ಸುಡುವಷ್ಟು ಬಿಸಿಬಿಸಿಯಾಗಿತ್ತು.

'ಅಲ್ಲ ಮಾರಾಯ್ರಾ, ನಿಮ್ಮ ಪಾಲಿನ ಊಟಕ್ಕೆ ನಾನು ಬಂದು ಕೂತ್ಗಂಡ್ರೆ ನಿಮಗೆ ಅರೆಹೊಟ್ಟೆ ಆಗಲ್ವಾ? ಹೇಳ್ದೆ ಕೇಳ್ದೆ ನಾನು ಬರಬಾರ್ದಿತ್ತೇನೋ?'

'ಊರಿಂದ ರಾಶಿ ತಿಂಡಿ ತಂದಿದೀಯಲ್ಲ? ಇವತ್ತು ಈ ಮಕ್ಕಳು ಊಟ ಮಾಡ್ತಾರೆ ಅಂತೀಯಾ?' ನಕ್ಕಿದ್ದ ಚಿದಾನಂದ.

'ಪಾಪ, ಬೇಕು ಅನಿಸಿದ್ದನ್ನು ಮಾಡ್ಕೊಡೋಕೆ ಇವಕ್ಕೆ ಯಾರಿದಾರೆ? ಇವರ ಮುಖ ನೋಡ್ತಿದ್ರೆ ಹೊಟ್ಟೆ ಬೆಂದು ಹೋಗುತ್ತೆ...'

'ಬೇಕು ಅನಿಸಿದ್ರೆ ಕೊಳ್ಳೋಕೆ ಎಲ್ಲಾನೂ ಸಿಗುತ್ತೆ ಮಾರಾಯಾ. ನೀನು ಅಷ್ಟೆಲ್ಲಾ ನೊಂದ್ಕೋಬೇಡ. ನಿನ್ನ ಅಕ್ಕನ ಮಕ್ಕಳಿಗೆ ನಾನು ಯಾವುದಕ್ಕೂ ಕಮ್ಮಿ ಮಾಡಲ್ಲ...' ಚಿದಾನಂದ ಹಗುರವಾಗಿ ಹೇಳಿದರೂ ದನಿ ಗದ್ಗದಿಸಿತ್ತಾ? ಇರಬಹುದೇನೋ.

ಊಟದ ಕಲಾಪ ಮುಗಿದು, ಅಪ್ಪ ಹೇಳಿದ್ದು ಸುಳ್ಳಲ್ಲ ಎನ್ನುವಂತೆ ಮಕ್ಕಳಿಬ್ಬರೂ ತಿಂಡಿಯ ಪೊಟ್ಟಣಕ್ಕೆ ಜೋತು ಬಿದ್ದು, ಹೊರಗೆ ನಡುಮನೆಯಲ್ಲಿ ಮತ್ತೆ ಶುರುವಾಗಿತ್ತು ವಾರ್ತಾಲಾಪ. ಭಾರ್ಗವನಿಗೆ ಅದರ ಕಡೆ ಗಮನ ಇರದಿದ್ದರೂ ಭಾಮ ಆ ಕಡೆಗೆ ಕಿವಿಗೊಟ್ಟಿದ್ದಳು. ಮಾವ ಸುಮ್ಮನೆ ಬಂದಿಲ್ಲ, ಏನೋ ಇದೆ ಎನ್ನುತ್ತಿತ್ತು ಹುಡುಗಿಯ ಆಂತರ್ಯ.

'ಬಾವ, ಒಂದು ಮಾತು ಹೇಳ್ತೀನಿ. ಬೇಜಾರು ಮಾಡ್ಕೋಬಾರ್ದು ನೀವು...'

'....'

'ಅಕ್ಕ ಹೋಗಿ ಆರು ತಿಂಗಳೂ ಕಳೆದಿಲ್ಲ. ಇದೇನು ಇವನು ಇಂಥಾ ಮಾತಾಡ್ತಾನೆ ಅಂತ ತಪ್ಪು ತಿಳ್ಕೋಬಾರ್ದು...'

'ಯಾಕೆ ಇಷ್ಟುದ್ದ ಪೀಠಿಕೆ ಹಾಕ್ತಿ ಮಾರಾಯಾ? ನಿನ್ನಕ್ಕ ಇಲ್ಲ ಅಂದಕೂಡ್ಲೆ ಸಂಬಂಧ ಸುಳ್ಳಾಗುತ್ತಾ? ಸಲಿಗೆಯಿಂದ ಮಾತಾಡೋ ಹಕ್ಕು ನಿಂಗೆ ಉಂಟೇ ಉಂಟು...'

'ನೋಡಿ, ದೇವರ ಸತ್ಯಕ್ಕೂ ಹೇಳ್ತೀದೀನಿ, ಸುನಂದಕ್ಕ ಹೋದ ಮೇಲೆ ಅಪ್ಪ, ಅಮ್ಮನ ಕತೆ ಇರ್ಲಿ, ನನಗೇ ಉಂಡಿದ್ದು ಉಂಡ ಹಾಗಾಗಲ್ಲ. ತಿಂದಿದ್ದು ತಿಂದ ಹಾಗಾಗಲ್ಲ. ರಾತ್ರಿ ಮೈಮರೆತು ನಿದ್ದೆ ಹತ್ತಲ್ಲ. ಕುಟ್ಟೆಹುಳದ ಹಾಗೆ ಒಳಗೊಳಗೇ ಸಂಕಟ ಕೊರೀತಿದೆ.'

'ಬೇರೆ ಏನಾದ್ರೂ ಮಾತಾಡು ಮಾರಾಯಾ. ಮಕ್ಕಳ ಎದುರು ಮತ್ತೆ ಇಂಥ ಮಾತು ಬೇಡ'.

'ಆಯ್ತು, ಬಾವ ಅನ್ನೋ ಸಲಿಗೆ ನೀವು ಕೊಟ್ಟಿದೀರಿ. ನೇರವಾಗಿ ಹೇಳ್ಬಿಡ್ತೀನಿ'.

'.......'

'ನನ್ನ ಹೆಂಡತಿಯ ತಂಗಿ ಒಬ್ಳಿದಾಳೆ. ನೀವೂ ನೋಡಿದೀರಿ ಅವಳನ್ನ. ರತ್ನ ಅನ್ನೋ ಹೆಸರಿಗೆ ತಕ್ಕ ಹಾಗೆ ಹುಡುಗಿ ರತ್ನಾನೇ'

'.......'

'ನೋಡಿ ಬಾವ, ಜಾತಕ ಫಸ್ಟ್ ಕ್ಲಾಸಾಗಿ ಕೂಡಿಬರುತ್ತೆ ಅಂತ ಮದುವೆ ಮಾಡ್ಬಿಡ್ತಾರೆ. ಹೀಗೆ ಜಾತಕ ಕೂಡಿ ಬಂದೋರೆಲ್ಲಾ ನೂರು ವರ್ಷ ಸುಖವಾಗಿ ಸಂಸಾರ ಮಾಡ್ಕಂಡಿರ್ತಾರಾ? ನಿಮ್ದೇ ಕತೆ ತಗಳ್ಳಿ'

'ಆ ವಿಷಯ ಬೇಡ ಅಂದ್ನಲ್ಲ'

'ತಪ್ಪಾಯ್ತು ಬಾವ. ಎಲ್ಲಿಗೆ ಹೋದ್ರೂ ಮಾತು ಸುನಂದಕ್ಕನ ಸುತ್ತಾ ಸುಳಿದು ಬಿಡುತ್ತೆ. ಮನಸ್ಸು ತುಂಬಾ ಅವಳೇ ತುಂಬ್ಕಂಡಿರ್ಬೇಕಾದ್ರೆ ಬಾಯಲ್ಲಿ ಬರದೇ ಇರುತ್ತಾ?'

'ಹೋಗ್ಲಿ ಬಿಡು...'

'ರತ್ನಂಗೆ ಯಾವತ್ತೋ ಮದುವೆ ಆಗಿರ್ಬೇಕಿತ್ತು. ವಯಸ್ಸು ಈಗಾಗ್ಲೇ ಮೂವತ್ತೆರಡು ಕಳೆದು ಹೋಯ್ತು. ನಿಮ್ಹತ್ರ ಸುಳ್ಳು ಪಳ್ಳು ಹೇಳಲ್ಲ ನಾನು. ಹುಡುಗೀದು ಮೂಲಾನಕ್ಷತ್ರ ಅನ್ನೋದೇ ದೊಡ್ಡ ತಲೆನೋವಾಗಿ ಕೂತ್ಬಿಟ್ಟಿದೆ...'

'......'

ಜಾತಕ ಗೀತಕ ನಂಬಲ್ಲ ಅಂತ ಜನ ಬಾಯಿಮಾತಿಗೆ ಅಂತಾರೆ. ಸ್ವಂತಕ್ಕೆ ಬಂದ್ರೆ ಜಾತಕ ತೋರಿಸ್ದೆ ಒಂದು ಹೆಜ್ಜೆ ಮುಂದಿಡಲ್ಲ. ಲವ್ ಮ್ಯಾರೇಜು ಅಂತಾದ್ರೆ ಅದು ಪ್ರತ್ಯೇಕ'.

'.......'

'ನಮ್ಮ ಮಾವ ಇದಾರಲ್ಲ, ಒಂಥರಾ ಜಿಗುಟಿನ ಪ್ರಾಣಿ. ಸತ್ಯ ಹರಿಶ್ಚಂದ್ರ ಸತ್ತು ಇವರು ಹುಟ್ಟಿದಾರೇನೋ ಅನ್ನೋ ಥರ ಆಡ್ತಾರೆ. ಜಾತಕಾನ ಚೂರು ಬದಲಾಯಿಸಿದ್ರಾಯ್ತುಪ್ಪಾ. ಬೇಕಾದಷ್ಟು ಜನ ಅಂತಹ ಕೆಲಸ ಮಾಡ್ತಾರಂತೆ. ನಿಮ್ಕೈಲಿ ಆಗ್ದಿದ್ರೆ ಹೇಳಿ. ನಾನು ನೋಡ್ಕಂತೀನಿ ಅಂತ ಹೇಳಿ ಹೇಳಿ ಗಂಟಲು ಒಣಗಿಸ್ಕೊಂಡಿದ್ದೇ ಬಂತು. ಜಪ್ಪಯ್ಯ ಅಂದ್ರೂ ಗಿರಾಕಿ ಒಪ್ಪಿಲ್ಲ'.

'ಅವರವರ ನಂಬಿಕೆ ಪ್ರಶ್ನೆ. ಅಂತಸ್ಸಾಕ್ಷಿ ಪ್ರಶ್ನೆ. ನಿನ್ಯಾಕೆ ಬಲವಂತ ಮಾಡ್ತಿ?'

'ಅಯ್ಯೋ, ನಿಮಗ್ಗೊತ್ತಿಲ್ಲ ಬಾವ. ತಂಗಿಗಿಂಥ ಹೆಚ್ಚು ನಮ್ಮನೆಯೋಳು ಕೊರಗ್ತಿದಾಳೆ. ಏನಾರೂ ಮಾಡಿ ಅಂತ ತಲೆ ತಿಂತಾಳೆ.

'ನಾನೇ ತಾಳಿ ಕಟ್ಟಿಬಿಡ್ಲೇನೇ? ಅಂದ್ರೆ ಅದಕ್ಕೂ ಹೂಂ ಅಂದ್ಬಿಡ್ತಾಳೇನೋ'

ಸೋದರಮಾವ ಜೋರಾಗಿ ನಕ್ಕಿದ್ದು ಒಳಗೆ ಡೈನಿಂಗ್ ಟೇಬಲಿನ ಎದುರು ಕೂತಿದ್ದ ಅಕ್ಕ, ತಮ್ಮನ ಕಿವಿಗೆ ಬಿದ್ದಿತ್ತು. ಅಪ್ರಯತ್ನವಾಗಿ ಭಾರ್ಗವನ ತುಟಿಗಳಲ್ಲೂ ನಗೆ ಅರಳಿದ್ದರೆ ಯಾವುದೋ ಶಂಕೆಯಿಂದ ಮುದುಡಿ ಹೋಗಿತ್ತು ಭಾಮನ ಮುಖ. ಅವಳ ಶಂಕೆ ಸುಳ್ಳಲ್ಲ ಅನ್ನುವಂತೆ ಬಂದ ವಿಷಯ ಬಾಯ್ಬಿಟ್ಟಿದ್ದ ಸೋದರಮಾವ.

'ನೀವು ದೊಡ್ಡ ಮನಸ್ಸು ಮಾಡಿ ಅವಳನ್ನ ಮದುವೆಯಾದ್ರೆ ಎರಡು ಮನೆ ಉದ್ಧಾರಾಗುತ್ತೆ ಬಾವ. ಇಲ್ಲ ಅನ್ಬೇಡಿ. ನಿಮ್ಮನ್ನ ಒಪ್ಪಿಸ್ತೀನಿ ಅಂತ ಇವಳ ಹತ್ರ ಹೇಳಿಯೇ ಬಂದಿದೀನಿ'.

'ನೀನು ಹೇಳ್ಬಿಟ್ರೆ ಆಯ್ತಾ? ಎರಡೆರಡು ಮಕ್ಕಳ ಅಪ್ಪ ಆಗಿ ಈ ವಯಸ್ಸಲ್ಲಿ ಮತ್ತೊಂದು ಮದುವೆ ಆಗೋಕೆ ಬಿಲ್‌ಕುಲ್ ತಯಾರಿಲ್ಲ ನಾನು...'

'ಕಡ್ಡಿ ಮುರಿದ ಹಾಗೆ ಮಾತಾಡ್ಬೇಡಿ ಬಾವ. ನಿಮಗೆ ಯಾವ ಮಹಾ ವಯಸ್ಸು? ನಲವತ್ತೆರಡು. ನಾಚಿಕೆ ಬಿಟ್ಟು ಹೇಳ್ತಿದೀನಿ ಅಂದ್ಕೋಬೇಡಿ. ಗೋಡೆ ಕಡೆ ತಿರುಗಿ ಮಲಗೋ ವಯಸ್ಸಾಗಿಲ್ಲ ನಿಮಗೆ...'

'ಏಯ್, ಮಕ್ಕಳೆದುರು ತಲೆಹರಟೆ ಮಾತಾಡ್ಬೇಡ. ಅವರೇನು ತೀರಾ ಸಣ್ಣೋರಲ್ಲ.'

'ಯೋಚ್ನೆ ಮಾಡಿ ಬಾವ. ಎತ್ತಿದ ಬಾಯಿಗೆ ಉತ್ತರ ಕೊಡೋದು ಬೇಡ. ಭಾಮ ವಯಸ್ಸಿಗೆ ಬಂದ ಹುಡುಗಿ. ಅವಳನ್ನ ತಿದ್ದೋಕಾದ್ರೂ ಮನೇಲಿ ಒಂದು ಹೆಣ್ಣು ದಿಕ್ಕು ಬೇಡ್ವಾ? ಕೊನೇಪಕ್ಷ ಒಂದು ಕಣ್ಣಿಟ್ಟಿರೋಕೆ? ಹೆಣ್ಣುಮಕ್ಕಳ ಜವಾಬ್ದಾರಿ ಅಂದ್ರೆ ತಮಾಷಿ ಅಲ್ಲ. ಭಾರ್ಗವ ಬೆಳೆಯೋ ಹುಡುಗ. ನಾಳೆಂದಿನ ದಿಕ್ಕು ತಪ್ಪೋ ಹಾಗಾದ್ರೆ ಯಾರು ಹೊಣೆ ಆಗ್ತಾರೆ?'

'ಏನೋ ಆಗುತ್ತೆ ಅಂತ ಗುಡ್ಡ ಗುಣಿಸಿ ಮಕ್ಕಳಿಗೆ ಮಲತಾಯಿ ತಂದ್ಬಿಡೋದಾ? ಏನಾಗ್ಬೇಕೋ ಅದು ಆಗೇ ಆಗುತ್ತೆ...'

'ಇದು ಧೋರಣೆ ಮಾತು ಬಾವ. ಏನೋ ಆಗೋದನ್ನ ತಡೆಯೋ ಪ್ರಯತ್ನ ಮಾಡ್ಬೇಕಲ್ವಾ?'

'ಹೇಳಿದ್ನಲ್ಲ, ರತ್ನ ಚಿನ್ನದಂಥ ಹುಡುಗಿ. ಹೊಟ್ಟೇಲಿ ಹುಟ್ಟಿದ ಮಕ್ಕಳ ಹಾಗೆ ಇವರನ್ನ ನೋಡ್ಕೋತಾಳೆ. ಅದಕ್ಕೆ ನಾನು ಗ್ಯಾರಂಟಿ. ನೀವು ನಿಶ್ಚಿಂತೆಯಾಗಿ ನಿಮ್ಮ ಕೆಲಸ ಮಾಡ್ಕಂಡಿರ್ಬೋದು. ನಾಳೆ ಇನ್ನೂ ದೊಡ್ಡ ಆಫೀಸರಾಗಿ'

'ಸಾಕೋ ನಿಲ್ಸು. ಅಟ್ಟ ಹತ್ತಿಸೋ ಮಾತಾಡ್ಬೇಡ...'

(ಸಶೇಷ)